O.S. ನಂಬರಃ  02/2022

ಪಿ. ಡಬ್ಲ್ಯೂಃ 1

ದಿಃ 15-10-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್.ಆರ್. ಎನ್ ಇವರಿಂದಃ

ನೀಲಮ್ಮ ದುರ್ಗು ಗೌಡ ಯಾರು ಎಂದರೆ ಸಾಕ್ಷಿಯು ಪ್ರತಿವಾದಿಯರ ತಾಯಿ ಎಂದು ನುಡಿಯುತ್ತಾರೆ.  ನಿಪಿ-13 ರಲ್ಲಿ ನೀಲಮ್ಮ ದುರ್ಗು ಗೌಡ ಮತ್ತು ಅವರ ಮನೆ ಕಂಡು ಬರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನೀಲಮ್ಮ ಇವರನ್ನು  ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.  ನೀವು ಹಾಜರುಪಡಿಸಿದ ಕಾಗದ ಪತ್ರಗಳನ್ನು ಎಲ್ಲಿಂದ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಪಂಚಾಯತಿಯಿಂದ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.  ಪಂಚಾಯತಿ ದಾಖಲಾತಿಗಳಲ್ಲಿ ನೀಲಮ್ಮ ದುರ್ಗು ಗೌಡ ಇವರ ಹೆಸರು ಇರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ.  ನಿಪಿ-14 ರಲ್ಲಿ  ಸುನೀತಾ ಕುಸ್ಲು ಗೌಡ ಇವರ ಹೆಸರು ಇರುತ್ತದೆ ಎಂದರೆ ಸರಿ.  ನಿಪಿ-15 ರಲ್ಲಿರುವ ಮನೆ  ಸುನೀತಾ ಕುಸ್ಲು ಗೌಡ ಇವರಿನಲ್ಲಿ ಇರುತ್ತದೆ ಎಂದರೆ ಸರಿ.   ನಿಪಿ-16 ರಲ್ಲಿ ಒಂದು ಮನೆ ನೀಲಮ್ಮ ದುರ್ಗು ಗೌಡ  ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸುನೀತಾ ಕುಸ್ಲು ಗೌಡ ಇವರು ಯಾರು ಎಂದರೆ ಸಾಕ್ಷಿಯು   ನೇ ಪ್ರತಿವಾದಿಯ ಹೆಂಡತಿ ಎಂದು ನುಡಿಯುತ್ತಾರೆ.  ನಿಮ್ಮ ಜಮೀನಿನ

ದಾಖಲಾತಿಗಳಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ನಿಮ್ಮ ಹೆಸರು ಇರುತ್ತದೆ ಎಂದರೆ ಸರಿ. ನಿಮ್ಮ ಕುಟುಂಬದಲ್ಲಿ ನಿಮ್ಮ ಸಹೋದರಿಯರೂ ಸಹ ಇರುತ್ತಾರೆ ಎಂದರೆ ಸರಿ. ಅಣ್ಣತಮ್ಮಂದರು ಇರುವುದಿಲ್ಲ. ಸದರಿ ದಾವೆ ಸಲ್ಲಿಸಲು ನಿಮ್ಮ ಸಹೋದರಿಯರು ನಿಮಗೆ ಯಾವುದೇ ಅಧಿಕಾರವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಿಮಗೆ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಸಂಬಂಧಪಟ್ಟವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ, ಒಂದು ವೇಳೆ ಇದ್ದರೆ ನನ್ನ ಹಕ್ಕು ನಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಅವರನ್ನು ಪಕ್ಷಗಾರರನ್ನಾಗಿ ಮಾಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.